ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

UNIVERSITY OF HORTICULTURAL SCIENCES, BAGALKOT

**ದಿನಾಂಕ 27-02-2020 ರಂದು ಮಧ್ಯಾಹ್ನ 2:30 ಗಂಟೆಗೆ ವ್ಯವಸ್ಥಾಪನಾ ಮಂಡಳಿ ಸಭಾಂಗಣ, ಆಡಳಿತ ಕಟ್ಟಡ, ಉದ್ಯಾನಗಿರಿ, ತೋವಿವಿ, ಬಾಗಲಕೋಟ ಇಲ್ಲಿ ನಡೆದ ತೋವಿವಿ, ಬಾಗಲಕೋಟದ ವ್ಯವಸ್ಥಾಪನಾ ಮಂಡಳಿಯ 55ನೇ ಸಭೆಯ ನಡುವಳಿಗಳು**

**MINUTES_OF 55TH MEETING OF THE BOARD OF MANAGEMENT HELD ON 27-02-2020 AT 2.30 PM AT BOARD ROOM, ADMINISTRATIVE BUILDING, UDYANAGIRI, UHS, BAGALKOT**

ಹಾಜರಾದ ಸದಸ್ಯರು

**Members present**

| | | | |
|---|---|---|---|
| 1. | ಡಾ. ಕೆ. ಎಂ. ಇಂದಿರೇಶ<br>ಕುಲಪತಿಗಳು ಹಾಗೂ ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ,<br>ತೋವಿವಿ, ಬಾಗಲಕೋಟ. | : | ಅಧ್ಯಕ್ಷರು |
| | **Dr. K. M. Indiresh**<br>Vice-Chancellor and Chairman<br>Board of Management, UHS, Bagalkot. | : | Chairman |
| 2. | ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿಧಾನ ಪರಿಷತ್ ಸದಸ್ಯರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ತೂಪಲ್ಲಿ ಗ್ರಾಮ, ಜೆ. ತಿಮ್ಮಸಂದ್ರ ಪೋಸ್ಟ್<br>ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ. | : | ಸದಸ್ಯರು |
| | **Sri R. Chowda Reddy Thoopalli**<br>Member of Legislative Council and Member<br>Board of Management, UHS, Bagalkot<br>Tupalli Village, J. Timmasandra Post<br>Srinivaspur Taluka, Kolar District. | : | Member |
| 3. | ಶ್ರೀ ಶಂಕರಪ್ಪ ಬಸಪ್ಪ ಮಳಲಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಮು:ಪೋ: ಉತ್ತೂರು, ತಾ: ಮುಧೋಳ, ಜಿ: ಬಾಗಲಕೋಟ | : | ಸದಸ್ಯರು |
| | **Sri. Shankarappa Basappa Malali**<br>Member, Board of Management, UHS, Bagalkot<br>Mu:Po: Utturu, Mudhol Taluka, Dist: Bagalkot | : | Member |
| 4. | ಶ್ರೀ ಎಸ್. ಎನ್. ಮಂಜುನಾಥಗೌಡ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶೆಟ್ಟಿಮಾದಮಂಗಲ ಗ್ರಾಮ, ವೆಲಗಲಬುರ್ರೆ (ಅಂಚೆ), ವಯಾ ದಳಸನೂರು,<br>ಮದನಹಳ್ಳಿ ಪಂಚಾಯಿತು-563126,<br>ತಾಲ್ಲೂಕು ಮತ್ತು ಜಿಲ್ಲೆ: ಕೋಲಾರ. | : | ಸದಸ್ಯರು |
| | **Sri S. N. Manjunathagowda**<br>S/o. Late Nanjappa<br>Member, Board of Management,<br>UHS, Bagalkot<br>Shettymadamangala Village,<br>Velagalaburre Post, Via Dalasanur,<br>Madanahally Panchayath-563126, Tq & Dist :<br>Kolar | : | Member |

| | | | |
|---|---|---|---|
| 5. | ಶ್ರೀ ಆರ್. ಎಂ. ನಾಗೇಶ್<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ನಂ. 25, ಜುಬಿಲಿ ಶಾಲೆ ಹತ್ತಿರ,<br>ಪಾಪರೆಡ್ಡಿಪಾಳ್ಯ, ನಾಗರಬಾವಿ, ಬೆಂಗಳೂರು-560 072. | : | ಸದಸ್ಯರು |
| | **Sri R. M. Nagesh**<br>Member, Board of Management, UHS, Bagalkot<br>No. 25, Near Jubilee School, Papareddy Palya,<br>Nagarbhavi, Bengaluru-560 072. | : | Member |
| 6. | ಶ್ರೀ ಯೋಗಿರಾಜ ಬಿ. ಪಾಟೀಲ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಸಂ. 142, "ಸದ್ಗುರು", 5ನೇ ಕ್ರಾಸ್, ಕುಸುಮನಗರ ಮುಖ್ಯ ರಸ್ತೆ, ವೈದ್ಯ ಮಠ ಸಂಕೀರ್ಣ ಹಿಂದುಗಡೆ, ಧಾರವಾಡ-580008. | : | ಸದಸ್ಯರು |
| | **Dr. Yogiraj B. Patil**<br>Member, Board of Management, UHS, Bagalkot<br>No. 142, "Sadguru", 5th Cross<br>Kusumnagar Main Road, Backside of Vaidya Math Complex, Dharwad-580008. | : | Member |
| 7. | ಶ್ರೀಮತಿ ಕಸ್ತೂರಿ ತವನಪ್ಪ ಅಷ್ಟಗಿ<br>ಸದಸ್ಯರು, ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ<br>ಶಿವನಗರ, ಸವದತ್ತಿ ರಸ್ತೆ, ಮುರುಘಾ ಮಠದ ಹತ್ತಿರ,<br>ಧಾರವಾಡ – 581208. | : | ಸದಸ್ಯರು |
| | **Smt. Kasturi Tavanappa Astagi**<br>Member, Board of Management, UHS,<br>Bagalkot, Shivanagar, Savadatti Road,<br>Near Muruga Math,<br>Dharwad-581208. | : | Member |
| 8. | ಡಾ. ಕೆ. ಎಮ್. ಇಂದಿರೇಶ<br>ಶಿಕ್ಷಣ ನಿರ್ದೇಶಕರು ಹಾಗೂ ಸದಸ್ಯರು<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯರು |
| | **Dr. K. M. Indiresh**<br>Director of Education and Member<br>Board of Management, UHS, Bagalkot | : | Member |
| 9. | ಡಾ. ಟಿ. ಬಿ. ಅಳ್ಳೊಳ್ಳಿ<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ | : | ಸದಸ್ಯ ಕಾರ್ಯದರ್ಶಿಗಳು |
| | **Dr. T. B. Allolli**<br>Registrar & Member-Secretary,<br>Board of Management, UHS, Bagalkot. | : | Member Secretary |

ಆರಂಭದಲ್ಲಿ, ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು ವ್ಯವಸ್ಥಾಪನ ಮಂಡಳಿಯ 55ನೇ ಸಭೆಗೆ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು. ಕುಲಸಚಿವರು ಗೌರವಾನ್ವಿತ ಕುಲಪತಿಗಳು ಹಾಗೂ ಅಧ್ಯಕ್ಷರು ಇವರಿಗೆ ಸಭೆಯನ್ನು ಕೈಗೊಂಡು ಕಾರ್ಯಸೂಚಿಗಳನ್ವಯ ಚರ್ಚೆಗಳನ್ನು ಕೈಗೊಳ್ಳಲು ವಿನಂತಿಸಿದರು, ಇದಕ್ಕೆ ಅಧ್ಯಕ್ಷರು ಸಮ್ಮತಿಸಿದರು. ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳ ಮೇಲೆ ಸುದೀರ್ಘ ಚರ್ಚೆಗಳನ್ನು ಕೈಗೆತ್ತಿಕೊಂಡು ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

At the outset, the Registrar and Member Secretary welcomed Chairman and members of the Board of Management to the 55th meeting. The Registrar requested the Hon'ble Vice Chancellor and Chairman to chair the meeting and permit him to conduct the deliberations as per the agenda for discussion. After the detailed deliberations and discussions on the set agenda, the following decisions were taken during the Board meeting.

| | |
|---|---|
| ಕಾರ್ಯಸೂಚಿ ಸಂ.1 | ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರಧಾನ ಮಾಡಲು ಅನುಮೋದನೆ. |
| | ಚರ್ಚೆ ಮತ್ತು ಠರಾವು :<br>ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಉಪಸ್ಥಿತಿ ಮತ್ತು ಅನುಪಸ್ಥಿತಿಯಲ್ಲಿ ಪ್ರಧಾನ ಮಾಡುವ ಪ್ರಸ್ತಾವನೆಯನ್ನು ಹಾಗೂ ದಿನಾಂಕ 26.02.2020 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಶೀಲಿಸಿತು. ಸುಧೀರ್ಘ ಚರ್ಚೆಯ ನಂತರ, ಮಂಡಳಿಯು ಉಪಸ್ಥಿತಿ ಮತ್ತು ಅನುಪಸ್ಥಿತಿಯಲ್ಲಿ ದಿನಾಂಕ 28.02.2020 ರಂದು ಹಮ್ಮಿಕೊಂಡಿರುವ 9ನೇ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆಯುತ್ತಿರುವ ಹಾಗೂ ಕಾರ್ಯಸೂಚಿಯಲ್ಲಿ ಮಂಡಿಸಿದಂತೆ ಅರ್ಹ ಅಭ್ಯರ್ಥಿಗಳ ಪಟ್ಟಿಗೆ ಅನುಮೋದನೆಯನ್ನು ನೀಡಿತು.<br>(ಕ್ರಮ : ಕುಲಸಚಿವರು) |
| **Item No.1** | **Approval for conferring the Graduate & Post-Graduate Degrees to the eligible candidates during 9th Convocation.** |
| | **Discussion and Resolution :**<br>The Board examined the item of conferring Graduate and Post-Graduate Degrees to eligible candidates in the 9th Convocation of UHS, Bagalkot scheduled on 28.02.2020, both in Person and Absentia. The Board also perused the recommendations of Academic Council made in its meeting held on 26.02.2020 regarding conferring of degree. After detailed discussion, the Board of Management accorded its approval for the list of eligible candidates enclosed both in Person and Absentia for conferment of Graduate and Post-Graduate Degrees during the 9th Convocation of UHS Bagalkot scheduled on 28.02.2020 as put up in the agenda.<br>**(Action: Registrar)** |
| ಕಾರ್ಯಸೂಚಿ ಸಂ.2 | ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದಲ್ಲಿ ವಿಶ್ವವಿದ್ಯಾಲಯದ ಮತ್ತು ದಾನಿಗಳ ಚಿನ್ನದ ಪದಕಗಳನ್ನು ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿತರಿಸಲು ಅನುಮೋದನೆ. |
| | ಚರ್ಚೆ ಮತ್ತು ಠರಾವು :<br>ಮಂಡಳಿಯು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ದಾನಿಗಳ ಚಿನ್ನದ ಪದಕಗಳನ್ನು ನೀಡುವ ಪ್ರಸ್ತಾವನೆಯನ್ನು ಮತ್ತು ದಿನಾಂಕ 26.02.2020ರ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಶೀಲಿಸಿತು ಮತ್ತು ಕಾರ್ಯಸೂಚಿಯಲ್ಲಿ ಮಂಡಿಸಿದ ಪಟ್ಟಿಯಂತೆ, ಅರ್ಹ |

| | |
|---|---|
| | ಅಭ್ಯರ್ಥಿಗಳಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಮತ್ತು ದಾನಿಗಳ ಚಿನ್ನದ ಪದಕಗಳನ್ನು ಪದವಿಯಲ್ಲಿ / ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಚಿನ್ನದ ಪದಕದ ನಿಯಮಾವಳಿಗಳ ಅನುಸಾರ ದಿನಾಂಕ 28.02.2020ರಂದು ಹಮ್ಮಿಕೊಂಡಿರುವ 9ನೇ ಘಟಿಕೋತ್ಸವದಲ್ಲಿ ಅರ್ಹ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನೀಡಲು ತನ್ನ ಅನುಮೋದನೆಯನ್ನು ನೀಡಿತು.<br>(ಕ್ರಮ : ಕುಲಸಚಿವರು) |
| **Item No.2** | **Approval for award of UHS and Donor's Gold Medals to the Graduate & Post-Graduate students during 9th Convocation.** |
| | **Discussion & Resolution :**<br>The Board examined the details of award of Gold Medal as per the recommendation of the Academic Council in its meeting held on 26.02.2020. The Board accorded its approval for the list of eligible candidates enclosed for award of Gold Medals of UHS and Donors to the eligible Graduate and Post-Graduate Students who have secured the highest marks in the degree/subjects as per UHS Gold Medal rules to be awarded in the 9th Convocation of UHS Bagalkot scheduled on 28.02.2020 as put up in the agenda.<br>**(Action : Registrar)** |
| ಟೇಬಲ್ ಕಾರ್ಯಸೂಚಿ<br>**TABLE AGENDA** | |
| ಕಾರ್ಯಸೂಚಿ ಸಂ.1 | 9ನೇ ಘಟಿಕೋತ್ಸವದಲ್ಲಿ ಪಿಹೆಚ್‌ಡಿ ವಿದ್ಯಾರ್ಥಿನಿ ಕುಮಾರಿ ಪೂರ್ಣಿಮಾ ಎಮ್ ಹೊಳೆಯಣ್ಣವರ ಇವರಿಗೆ ತೋವಿವಿ ಚಿನ್ನದ ಪದಕವನ್ನು ಪ್ರದಾನ ಮಾಡುವ ಕುರಿತು. |
| | ಚರ್ಚೆ ಮತ್ತು ಠರಾವು :<br>9ನೇ ಘಟಿಕೋತ್ಸವದಲ್ಲಿ ಪಿಹೆಚ್‌ಡಿ ವಿದ್ಯಾರ್ಥಿನಿ ಕುಮಾರಿ ಪೂರ್ಣಿಮಾ ಎಮ್ ಹೊಳೆಯಣ್ಣವರ ಇವರಿಗೆ ತೋವಿವಿ ಚಿನ್ನದ ಪದಕವನ್ನು ಪ್ರದಾನ ಮಾಡುವ ಪ್ರಸ್ತಾವನೆಯನ್ನು ಮತ್ತು ದಿನಾಂಕ 26.02.2020ರ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಯ ನಂತರ, ಮಂಡಳಿಯು ಪಿ.ಹೆಚ್.ಡಿ. (ಕೀಟಶಾಸ್ತ್ರ) ವಿದ್ಯಾರ್ಥಿನಿ ಕುಮಾರಿ ಪೂರ್ಣಿಮಾ ಎಮ್ ಹೊಳೆಯಣ್ಣವರ ಇವರಿಗೆ 9ನೇ ಘಟಿಕೋತ್ಸವದಲ್ಲಿ ತೋವಿವಿ ಚಿನ್ನದ ಪದಕವನ್ನು ಪ್ರದಾನ ಮಾಡಲು ತನ್ನ ಅನುಮೋದನೆಯನ್ನು ನೀಡಿತು.<br>(ಕ್ರಮ : ಕುಲಸಚಿವರು) |
| **Item No.1** | **Award of UHS Gold Medal to the doctoral student Miss. Poornima M. Holeyannavar during 9th Convocation.** |
| | **Discussion & Resolution :**<br>The Board examined proposal for Award of UHS Gold Medal to the doctoral student Miss. Poornima M. Holeyannavar during 9th Convocation also perused the recommendations of Academic Council made in its meeting held on 26.02.2020. After detailed deliberations, the Board accorded its approval for Award of UHS Gold Medal to the Ph.D. (Entomology) student Miss. Poornima M. Holeyannavar during 9th Convocation.<br>**(Action : Registrar)** |

| | |
|---|---|
| ಕಾರ್ಯಸೂಚಿ ಸಂ.2 | ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ಮುಖ್ಯ ಆಡಳಿತ ಕಟ್ಟಡ **(Ground Floor and First Floor (Part))** ಕಾಮಗಾರಿಯ ಕುರಿತು. |
| | **ಚರ್ಚೆ ಮತ್ತು ಠರಾವು :**<br>ತೋಟಗಾರಿಕಾ ಅಭಿಯಾಂತ್ರಿಕ ಮತ್ತು ಆಹಾರ ತಂತ್ರಜ್ಞಾನ, ಮಹಾವಿದ್ಯಾಲಯ, ದೇವಿಹೊಸೂರಿನಲ್ಲಿ ಮುಖ್ಯ ಆಡಳಿತ ಕಟ್ಟಡ (Ground Floor and First Floor (Part)) ಕಾಮಗಾರಿಯ ಕುರಿತ ಪ್ರಸ್ತಾವನೆಯನ್ನು ಪರಿಶೀಲಿಸಿತು. ಸುದೀರ್ಘ ಚರ್ಚೆಗಳ ನಂತರ, ಮಂಡಳಿಯು ಸದರಿ ಮಹಾವಿದ್ಯಾಲಯದ ಮುಖ್ಯ ಕಟ್ಟಡದ ನಿರ್ಮಾಣ ಅವಶ್ಯಕತೆಯನ್ನು ಪರಿಗಣಿಸಿ, ಕಾರ್ಯಸೂಚಿಯಲ್ಲಿ ಮಂಡಿಸಿರುವಂತೆ ಒಟ್ಟು ರೂ. 9,99,90,493-00 (ಒಂಭತ್ತು ಕೋಟಿ ತೊಂಬತ್ತೊಂಬತ್ತು ಲಕ್ಷ ತೊಂಬತ್ತು ಸಾವಿರ ನಾಲ್ಕು ನೂರದ ತೊಂಬತ್ಮೂರು ರೂಪಾಯಿಗಳು ಮಾತ್ರ) ಗಳ ಕಾಮಗಾರಿಗೆ ಅಂದಾಜು ಪತ್ರಿಕೆಗೆ ತನ್ನ ಅನುಮೋದನೆ ನೀಡಿತು.<br>(ಕ್ರಮ : ಆಸ್ತಿ ಅಧಿಕಾರಿಗಳು/ಹಣಕಾಸು ನಿಯಂತ್ರಣಾಧಿಕಾರಿಗಳು) |
| **Item No.2** | **According approval for the work of Construction of Ground Floor & First Floor (Part) Main Administrative Building (College) at College of Horticulture Engineering and Food Technology at Devihosur (Haveri).** |
| | **Discussion & Resolution :**<br>Board examined the proposal for approval for the work of Construction of Ground Floor & First Floor (Part) Main Administrative Building (College) at College of Horticulture Engineering and Food Technology at Devihosur (Haveri). After detailed deliberations, Board considering the necessity of construction of the main administrative building of said College has accorded its approval for estimate cost of Rs. 9,99,90,493-00 (Rupees Nine Crore Ninety Nine Lakhs Ninety Thousand Four Hundred and Ninety Three only) as put up in Agenda.<br>**(Action : Estate Officer/Comptroller)** |
| ಕಾರ್ಯಸೂಚಿ ಸಂ.3 | **ಪ್ರೇಕ್ಷಾಗೃಹ ಕಟ್ಟಡ ಕಾಮಗಾರಿಯ ಅಂತಿಮ ಬಿಲ್ಲನ್ನು ಪಾವತಿಸುವ ಕುರಿತು.** |
| | **ಚರ್ಚೆ ಮತ್ತು ಠರಾವು :**<br>ಮಂಡಳಿಯು ಪ್ರಸ್ತಾವನೆಯನ್ನು ಪರಿಶೀಲಿಸಿತು ಮತ್ತು ವಿವರವಾದ ಚರ್ಚೆಯ ನಂತರ, ಮಂಡಳಿಯು ಸದರಿ ಕಾಮಗಾರಿಯನ್ನು ಗುತ್ತಿಗೆದಾರನು ಮುಕ್ತಾಯಗೊಳಿಸಿರುವುದರಿಂದ ಕಾಮಗಾರಿಯು ಅಂತಿಮ ಬಿಲ್ಲನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲು ಅನುಮೋದನೆಯನ್ನು ನೀಡಿತು.<br>ಆದಾಗ್ಯೂ, ಸರ್ಕಾರದ ಅನುಮತಿ ಪಡೆಯದೆ ಈ ಕಾರ್ಯವನ್ನು ನೀಡಲಾಗಿರುವ ಬಗ್ಗೆ ಸಂಬಂಧಿಸಿದವರಿಂದ ಕಾರಣಗಳನ್ನು ಪಡೆಯಬೇಕೆಂದು ಕೆಲವು ಸದಸ್ಯರು ತಮ್ಮ ಅಭಿಪ್ರಾಯ ತಿಳಿಸಿದರು. ಸದರಿ ಕಾಮಗಾರಿಯನ್ನು ಸರ್ಕಾರದ ಮಂಜೂರಾತಿ ಪಡೆದ ನಂತರವೇ ನಿರ್ವಹಿಸಬೇಕೆಂದು ವ್ಯವಸ್ಥಾಪನಾ ಮಂಡಳಿಯ 29ನೇ ಸಭೆಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿರುವುದನ್ನು ಸಭೆಯು ಗಮನಿಸಿತು. ಮುಂದುವರೆದು, ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ವ್ಯಕ್ತಿಗಳಿಗೆ ಈ ವಿಷಯವಾಗಿ ನೋಟಿಸ್ ಜಾರಿ ಮಾಡಲು ಮಂಡಳಿಯು ನಿರ್ಧರಿಸಿತು. ಅಂದಾಜು ವೆಚ್ಚ ರೂ. 10 ಕೋಟಿಗಳಿಗಿಂತ ಹೆಚ್ಚಿರುವುದರಿಂದ ಘಟನೋತ್ತರ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಹ ತೀರ್ಮಾನಿಸಲಾಯಿತು.<br>(ಕ್ರಮ : ಆಸ್ತಿ ಅಧಿಕಾರಿಗಳು/ಹಣಕಾಸು ನಿಯಂತ್ರಣಾಧಿಕಾರಿಗಳು) |

| Item No.3 | **Final payment of bills towards Auditorium Building at University of Horticultural Sciences, Bagalkot.** |
|---|---|
| | **Discussion & Resolution :**<br>Board examined the proposal and after detailed deliberations, Board accorded its approval to make the final payment to the contractor, as the contractor has executed and completed the works.<br><br>However, some of the members expressed their concern and opined that, people concern with this work in the past should be asked to furnish reasons on account of which the work has been given without taking sanction from the Government. In this context, it may be recalled that, Board of Management during its 29th meeting explicitly mentioned that, the related works should be executed only after getting sanction from the Government. Further, it was decided to issue notice in this regard for those persons related to this issue. It was also decided to submit the proposal to the Government for post-facto sanction, as the estimated cost is more than 10 crores.<br><br>**(Action : Estate Officer/Comptroller)** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇನ್ನಿತರ ವಿಷಯಗಳು ಮತ್ತು ಸಲಹೆಗಳು**<br>**Any other items with permission of the Chair** | |
| **1** | ಕು. ನಂದಿನಿ, ಸಹಾಯಕ ಪ್ರಾಧ್ಯಾಪಕರು, ಕೃವಿವಿ, ಧಾರವಾಡ ಇವರು ತೋಮವಿ, ಕೋಲಾರಗೆ ಹೋಗಲು ಒಪ್ಪದಿರುವ ಕಾರಣ ಇವರಿಗೆ ತೋಮವಿ, ಕೋಲಾರ ಬದಲಿಗೆ ತೋಮವಿ, ಮೈಸೂರಿಗೆ ನಿಯುಕ್ತಿಗೊಳಿಸುವ ವಿಷಯ ಕುರಿತು ಚರ್ಚಿಸಲಾಗಿದ್ದು, ಆದರೆ ಮಂಡಳಿಯು ಸದರಿಯವರನ್ನು ತೋಮವಿ, ಕೋಲಾರ ಬದಲಿಗೆ ತೋಮವಿ, ಮೈಸೂರಿಗೆ ನಿಯುಕ್ತಿಗೊಳಿಸಲು ತನ್ನ ಒಪ್ಪಿಗೆ ನೀಡಿರುವುದಿಲ್ಲ. |
| | The matter was discussed regarding deputing of Ms. Nandini, Assistant Professor, UAS, Dharwad to COH, Mysuru, since she is not agree to go to COH, Kolar, But, Board did not agree to post her at COH, Mysuru instead of COH, Kolar. |
| **2** | ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳ ಅಧ್ಯಯನ ಪ್ರವಾಸದ ಕುರಿತು ಚರ್ಚಿಸುವಾಗ, ವ್ಯವಸ್ಥಾಪನಾ ಮಂಡಳಿ ಅಧಿಕಾರೇತರ ಸದಸ್ಯರುಗಳಿಗೆ GIZ ಪ್ರಾಧಿಕಾರಗಳ ಹಣಕಾಸಿನ ನೆರವಿನೊಂದಿಗೆ ವಿಶ್ವವಿದ್ಯಾಲಯವು 29.04.2020 ರಿಂದ 10.5.2020 ರವರೆಗೆ ಜರ್ಮನಿ ಮತ್ತು ನೆದರಲ್ಯಾಂಡ್ ದೇಶಗಳಿಗೆ ಅಧ್ಯಯನ ಪ್ರವಾಸವನ್ನು ಆಯೋಜಿಸಲಾಗುವುದು ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.<br>(ಕ್ರಮ: ಕುಲಸಚಿವರು) |
| | While discussing about organizing Study Tour to the members of Board of Management, Chairman informed that, Study Tour to the members of the Board of Management will be organized from 29.4.2020 to 10.5.2020 to Germany and Netherland Country with the financial assistance of GIZ authority.<br>**(Action: Registrar)** |

| | |
|---|---|
| 3 | ಗೌರವಾನ್ವಿತ ಸದಸ್ಯರಾದ ಡಾ. ವೈ. ಬಿ. ಪಾಟೀಲರವರು ವಿಶ್ವವಿದ್ಯಾಲಯದ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮತ್ತು ಈ ಕುರಿತು ಎಲ್1, ಎಲ್2 ಮತ್ತು ಎಲ್3 ಹೆಸರುಗಳನ್ನು ಮತ್ತು ಇನ್ನಿತರ ವಿವರಗಳನ್ನು ಹಾಜರುಪಡಿಸಲು ತಿಳಿಸಿದರು. ಅಧ್ಯಕ್ಷರು ವಿಶ್ವವಿದ್ಯಾಲಯವು ಈವರೆಗೆ ಪಾಲಿಸುತ್ತಿರುವ ನಿಯಮಾವಳಿಗಳಲ್ಲಿ ಈ ತರಹದ ನಿಯಮಗಳು ಇರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಇಂತಹ ಪ್ರಕ್ರಿಯೆಗಳು ಸಮಯವನ್ನು ತೆಗೆದುಕೊಳ್ಳುವುದು ಅಲ್ಲದೇ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ವಸ್ತುಗಳನ್ನು ಖರೀದಿಸುವ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲು ವಿಳಂಬಕ್ಕೆ ಕಾರಣವಾಗುತ್ತದೆ. ಮುಂದುವರೆದು, ಅಧ್ಯಕ್ಷರು ಈ ಕುರಿತು ಇತರೆ ವಿಶ್ವವಿದ್ಯಾಲಯಗಳು ಪಾಲಿಸುತ್ತಿರುವ ನಿಯಮಾವಳಿಗಳನ್ನು ಸಂಗ್ರಹಿಸಲಾಗುವುದು ಮತ್ತು ವಿಷಯವನ್ನು ಪರಿಶೀಲಿಸಲಾಗುವುದು ಎಂದು ಸಭೆಗೆ ತಿಳಿಸಿದರು.<br>**(ಕ್ರಮ: ಆಸ್ತಿ ಅಧಿಕಾರಿಗಳು)** |
| | Dr. Y. B. Patil, Hon'ble Member raised the issue related to tender process in the University for various works and insisted to present the name of L1, L2 and L3 and other details in this regard. The Chairman informed that, there are no such procedures which are being followed until now in the University. Such process consumes lot of time, thus causes delays in the finalizing the tender process for execution of various works and purchase of materials. Further, Chairman briefed to the Board that, procedures to be followed in other Universities will be collected and issue will be examined.<br>**(Action: Estate Officer)** |

ವಂದಾನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

The meeting was concluded with the vote of thanks.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ವ್ಯವಸ್ಥಾಪನಾ ಮಂಡಳಿ, ತೋವಿವಿ, ಬಾಗಲಕೋಟ

**Registrar & Member-Secretary**
**Board of Management, UHS, Bagalkot**